ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ತೋಟಗಾರಿಕೆ

ಪತ್ರಿಕೆಯ ಹೆಸರು : NAME OF THE NEWS PAPER : ನಿಶ್ಪಕ್ಷಪಾತ ದಿನಾಂಕ : DATE : 11/05/2019

ರಾಜ್ಯದ ಮೀಸಲು ಅಧಿನಿಯಮ ಒಪ್ಪಿದ ನ್ಯಾಯಾಲಯ, ಸುಗ್ರೀವಾಜ್ಞೆ ಮೂಲಕ ಕಾಯಿದೆ ಜಾರಿಗೆ ತಂದಿದ್ದ ರಾಜ್ಯ ಸರಕಾರ

ಬಡ್ತಿ ಮೀಸಲಿಗೆ ಸುಪ್ರೀಂ ಅಸ್ತು!

ವಿಶ್ವವಾಣಿ ಸುದ್ದಿಮನೆ ಬೆಂಗಳೂರು 11/5/19

ರಾಜ್ಯ ಸರಕಾರದ ಸುಗ್ರೀವಾಜ್ಞೆ ಅನುಸಾರ ಜಾರಿಗೊಂಡಿದ್ದ ಬಡ್ತಿ ಮೀಸಲು ಕಾಯಿದೆಗೆ ಸುಪ್ರೀಂ ಕೋರ್ಟ್ ಸಮ್ಮತಿ ನೀಡಿದ್ದು, ಸಮ್ಮಿಶ್ರ ಸರಕಾರದ ಮಹಾತ್ವಾಕಾಂಕ್ಷೆ ಕಾನೂನಿಗ ಮನ್ನಣೆ ಸಿಕ್ಕಂತಾಗಿದೆ..

ಮೈತ್ರಿ ಸರಕಾರ 2018ರ ಜನವರಿ 31ರಿಂದ ಅಧಿಕೃತ ಜಾರಿಗೊಳಿಸಲು ತೀರ್ಮಾನಿಸಿದ್ದು, ಸುಪ್ರೀಂ ಕೋರ್ಟ್‌ನ ಅಂತಿಮ ತೀರ್ಮಾನಕ್ಕೆ ಬದ್ಧ ಎಂದು ತಿಳಿಸಿತ್ತು. ಅಂದಿನ ಸಚಿವ ಸಂಪುಟ ಸಭೆಯಲ್ಲಿ ನ್ಯಾಯಾಲಯದ ಅಂತಿಮ ಆದೇಶಕ್ಕೆ ಅನುಗುಣವಾಗಿ ಕಾಯಿದೆ ಬದಲಾವಣೆ ಮಾಡಿಕೊಳ್ಳುವ ಷರತ್ತು ವಿಧಿಸಿಕೊಂಡಿತ್ತು. ಇದೀಗ ಕಾಯಿದೆ ಒಪ್ಪಿರುವ ಸುಪ್ರೀಂ ಕೋರ್ಟ್ ಕಾನೂನು ಜಾರಿಗೆ ಹಸಿರು ನಿಶಾನೆ ತೋರಿಸಿದೆ. ಆ ಮೂಲಕ ಪರಿಶಿಷ್ಟ ಜಾತಿ ಮತ್ತು ಪಂಗಡದ ಸರಕಾರಿ ನೌಕರರು ತಮ್ಮ ಮುಂಬಡ್ತಿ ಕಾಯ್ದುಕೊಳ್ಳಲಿದ್ದಾರೆ.

2002ರ ಬಡ್ತಿ ಮೀಸಲು ಜಾರಿಗೆ ವಿರುದ್ಧವಾಗಿ ಸುಪ್ರೀಂ ಕೋರ್ಟ್‌ನಲ್ಲಿ ತಕರಾರು ಸಲ್ಲಿಸಲಾಗಿತ್ತು. ಹೀಗಾಗಿ, 2017ರ ಫೆಬ್ರವರಿಯಲ್ಲಿ ಸುಪ್ರೀಂ ಕೋರ್ಟ್ ಕಾಯಿದೆ ರದ್ದುಗೊಳಿಸಿತ್ತು. ನ್ಯಾಯಾಲಯದ ಈ ಆದೇಶಕ್ಕೆ ಸೆಡ್ಡು ಹೊಡೆದಿದ್ದ ಸಿದ್ದರಾಮಯ್ಯ ನೇತೃತ್ವದ ಸರಕಾರ ಸುಗ್ರೀವಾಜ್ಞೆ ಜಾರಿಗೊಳಿಸಿ ರಾಷ್ಟ್ರಪತಿ ಅಂಕಿತಕ್ಕೆ ಕಳುಹಿಸಿದ್ದು, ಕಾಯಿದೆ ಅನಿವಾರ್ಯತೆ ಬಗ್ಗೆ ವಿವರ ಕೇಳಿ ಉಭಯ ಸದನಗಳ ಒಪ್ಪಿಗೆಗೆ ಸುಗ್ರೀವಾಜ್ಞೆ ವಾಪಸು ಮೊಡಿದ್ದರು.

2017ರ ಆಗಸ್ಟ್‌ನಲ್ಲಿ ರಾಜ್ಯ ಸರಕಾರ ಉಭಯ ಸದನಗಳ ಒಪ್ಪಿಗೆ ಪಡೆದು ರಾಷ್ಟ್ರಪತಿಗಳಿಗೆ ಕಳುಹಿಸಿತ್ತು. ಅಂತಿಮವಾಗಿ ರಾಷ್ಟ್ರಪತಿ ಅಂಕಿತದೊಂದಿಗೆ ಸುಗ್ರೀವಾಜ್ಞೆ ವಿಚಾರದಲ್ಲಿ ರಾಜ್ಯ ಸರಕಾರಕ್ಕೆ ಗೆಲುವು ಸಿಕ್ಕಿತ್ತು. ಆದರೆ, ಸುಗ್ರೀವಾಜ್ಞೆ ಕಾಯಿದೆಯಾಗಿ ಜಾರಿಗೊಳಿಸುವ ನಿಟ್ಟಿನಲ್ಲಿ ಕುಮಾರಸ್ವಾಮಿ ನೇತೃತ್ವದ ರಾಜ್ಯ ಸರಕಾರ ವಿಳಂಬ ಮಾಡುತ್ತಿದೆ ಎಂಬ ಆರೋಪ ಸಂಪುಟದಲ್ಲೇ ಕೇಳಿಬಂದಿತ್ತು. ಡಿಸಿಎಂ ಪರಮೇಶ್ವರ ಮತ್ತು ಸಮಾಜ ಕಲ್ಯಾಣ ಸಚಿವ ಪ್ರಿಯಾಂಕ್ ಖರ್ಗೆ ರಾಜೀನಾಮೆ ನೀಡುವ ಬೆದರಿಕೆ ಹಾಕಿದ್ದರು. ಅಂತಿಮವಾಗಿ ರಾಜ್ಯ ಸರಕಾರ 2019ರ ಜನವರಿಯಲ್ಲಿ ಕಾಯಿದೆ ಜಾರಿಗೆ ಒಪ್ಪಿಗೆ ಸೂಚಿಸಿತ್ತು.

ಇದೀಗ ನ್ಯಾಯಾಲಯ ರಾಜ್ಯ ಸರಕಾರದ ಕಾಯಿದೆ ಒಪ್ಪಿದ್ದು, ಯಥಾವತ್ತು ಜಾರಿಗೆ ಯಾವುದೇ ತೊಂದರೆಯಿಲ್ಲ ಎಂದು ತಿಳಿಸಿದೆ. ಸುಗ್ರೀವಾಜ್ಞೆ ಮೂಲಕ ದಲಿತರ ಹಿತ ಕಾಯ್ದುಕುರಿತು ಕಾಂಗ್ರೆಸ್ ಮತ್ತು ಜೆಡಿಎಸ್ ಸಮ್ಮಿಶ್ರ ಸರಕಾರ ಬೀಗುತ್ತಿದೆ. ಆದರೆ, ಇದರ ವಿರುದ್ಧ ಮೇಲ್ಮನವಿ ಸಲ್ಲಿಸಲು

ಕಾಯಿದೆ ಸವೆಸಿದ ಹಾದಿ

ಬಡ್ತಿ ಮೀಸಲು ಕಾಯಿದೆ 2002

2017ರ ಫೆ. 9ರಂದು ಸುಪ್ರೀಂ ಕೋರ್ಟ್‌ನಲ್ಲಿ ರದ್ದು

2017ರ ಆಗಸ್ಟ್ 7ರಂದು ರಾಜ್ಯ ಸರಕಾರದಿಂದ ಸುಗ್ರೀವಾಜ್ಞೆ

2017ರ ನವೆಂಬರ್‌ನಲ್ಲಿ ಉಭಯ ಸದನಗಳ ಒಪ್ಪಿಗೆ

ರಾಷ್ಟ್ರಪತಿಗಳ ಅಂಕಿತ

2019ರ ಜ. 31ರಂದು ಸಚಿವ ಸಂಪುಟದ ಒಪ್ಪಿಗೆ

2019 ಮೇ 10ರಂದು ಸುಪ್ರೀಂ ಕೋರ್ಟ್ ಸಮ್ಮತಿ

'ಅಹಿಂಸಾ' ಸಂಘಟನೆ ತೀರ್ಮಾನಿಸಿದೆ. ಬಡ್ತಿ ಮೀಸಲು ಸಂಬಂಧ ಮತ್ತೊಂದು ಕಾನೂನು ಸಮರಕ್ಕೆ ವೇದಿಕೆ ಸಿದ್ಧವಾಗುವ ಸಾಧ್ಯತೆಯಿದೆ.

ಮರುಪರಿಶೀಲನಾ ಅರ್ಜಿ ಸಲ್ಲಿಕೆಗೆ ನಿರ್ಧಾರ: ರಾಜ್ಯದ ನೀತಿ ಎತ್ತಿಹಿಡಿದ ಸುಪ್ರೀಂ ಕೋರ್ಟ್ ತೀರ್ಪು ಪ್ರಶ್ನಿಸಿ ಮರುಪರಿಶೀಲನಾ ಅರ್ಜಿ ಸಲ್ಲಿಸಲು ರಾಜ್ಯ ಅಲ್ಪಸಂಖ್ಯಾತ ಹಿಂದುಳಿದ ಸಾಮಾನ್ಯ (ಅಹಿಂಸಾ) ಒಕ್ಕೂಟ ತೀರ್ಮಾನಿಸಿದೆ. ಒಕ್ಕೂಟದ ಅಧ್ಯಕ್ಷ ಎಂ. ನಾಗರಾಜ್ ಮಾತನಾಡಿ, ತೀರ್ಪು ತಪ್ಪಿನಿಂದ ಕೂಡಿದೆ. ಅದರಿಂದ ಅಹಿಂಸಾ ವರ್ಗಕ್ಕೆ

ಮೀಸಲು ಅಧಿನಿಯಮ 2018 ಅನ್ನು ಎತ್ತಿ ಹಿಡಿಯುವ ತೀರ್ಪು ಸ್ವಾಗತಿಸುತ್ತೇನೆ. ನಮ್ಮ ಸರಕಾರ ಸಂವಿಧಾನದ ಚೌಕಟ್ಟಿನಲ್ಲಿ ಸರಕಾರಿ ನೌಕರರ ಹಿತ ರಕ್ಷಣೆಗೆ ಬದ್ಧವಾಗಿದೆ. ಎಲ್ಲರಿಗೂ ಅವಕಾಶ ಒದಗಿಸುವ ಸರಕಾರದ ಸದುದ್ದೇಶವನ್ನು ತೀರ್ಪು ಬೆಂಬಲಿಸಿದೆ.

- ಎಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿ

ಬಡ್ತಿ ಮೀಸಲು ವಿಚಾರದಲ್ಲಿ ಸರಕಾರಿ ನೌಕರರಿಗೆ ಅನ್ಯಾಯ ಆಗುವುದು ಎಂದು ನಾನು ಮುಖ್ಯಮಂತ್ರಿ ಆಗಿದ್ದಾಗಲೇ ಕಾನೂನು ಜಾರಿಗೆ ತರಲಾಗಿತ್ತು. ಆದರೆ, ಇದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೊರೆ ಹೋಗಲಾಗಿತ್ತು. ಕೋರ್ಟ್ ನಮ್ಮ ಕ್ರಮವನ್ನು ಎತ್ತಿ ಹಿಡಿದಿದೆ. ಕಾಂಗ್ರೆಸ್-ಜೆಡಿಎಸ್ ದಲಿತರು ಮತ್ತು ಹಿಂದುಳಿದವರ ಪರ ಕೆಲಸ ಮಾಡುತ್ತದೆ ಎನ್ನುವುದಕ್ಕೆ ಇದು ಸಾಕ್ಷಿ. ಹೀಗಾಗಿ ದಲಿತರು ಬಿಜೆಪಿ ಬಗ್ಗೆ ಎಚ್ಚರಿಕೆಯಿಂದ ಇರಬೇಕು.

- ಸಿದ್ದರಾಮಯ್ಯ ಮಾಜಿ ಮುಖ್ಯಮಂತ್ರಿ

ಪರಿಶಿಷ್ಟ ಜಾತಿ ಮತ್ತು ಪಂಗಡದ ಬಡ್ತಿ ಮೀಸಲು ಸಂಬಂಧ ರಾಜ್ಯ ಸರಕಾರ ತಂದಿದ್ದ ಕಾನೂನಿಗೆ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಸ್ವಾಗತಾರ್ಹ. ಯಾರಿಗೂ ಹಿಂಬಡ್ತಿ ಆಗದಂತೆ ಸರಕಾರ ಎಚ್ಚರ ವಹಿಸಲಿದ್ದು, ಕಾನೂನು ಇಲಾಖೆ ಜತೆ ಚರ್ಚಿಸಿ ಕಾನೂನು ಜಾರಿಗೊಳಿಸಲಾಗುವುದು.

-ಡಾ. ಜಿ ಪರಮೇಶ್ವರ ಉಪಮುಖ್ಯಮಂತ್ರಿ

ಅನ್ಯಾಯವಾಗಿದೆ. ಈ ಬಗ್ಗೆ ಸ್ಪಷ್ಟನೆ ಕೋರಲು ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಲು ಹಾಗೂ ರಾಜ್ಯ ಸರಕಾರದ ವಿರುದ್ಧ ಅಹಿಂಸಾತ್ಮಕ ಹೋರಾಟ ನಡೆಸಲು ಒಕ್ಕೂಟ ತೀರ್ಮಾನಿಸಿದೆ. ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಶೇ.18ರಷ್ಟು ಮೀಸಲು ನೀಡುವ ಕುರಿತು ತಕರಾರಿಲ್ಲ, ಆದರೆ, ಈ ಎಲ್ಲ ಮೀಸಲು ಪ್ರಮಾಣ ಮೀರಿ ಎಲ್ಲ ಹುದ್ದೆಗಳಿಗೂ ಬಡ್ತಿ ನೀಡುವುದರಿಂದ ಉಳಿದ ವರ್ಗಕ್ಕೆ ಅನ್ಯಾಯ ಆಗಲಿದೆ. ಇದನ್ನು ಸುಪ್ರೀಂ ಕೋರ್ಟ್ ಗಮನಕ್ಕೆ ತರಲಾಗುವುದು ಎಂದಿದ್ದಾರೆ.